ಪ್ರಜಾ ಪ್ರಗತಿ

# ವಿಕಾಸ್ ಬ್ಯಾಂಕಿನ ನಿವ್ವಳ ಲಾಭ 6.35 ಕೋಟಿ



**ಹೊಸಪೇಟೆ**

2021-22ನೇ ಸಾಲಿನಲ್ಲಿ ವಿಕಾಸ್ ಬ್ಯಾಂಕ್ ತನ್ನ ಪ್ರಗತಿಯ ನಡೆಯನು ಮುಂದುವರೆಸಿಕೊಂಡು 11.23ಕೋಟಿ ಲಾಭ ಮಾಡಿದೆ. ಆದಾಯ ತೆರಿಗೆ ಹಾಗು ಇತರೆ ಅವಕಾಶಗಳ ನಂತರ ಬ್ಯಾಂಕು 6.35 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ವಿಶ್ವನಾಥ ಚ.ಹಿರೇಮಠ ತಿಳಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಶುಕ್ರವಾರ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2 ವರ್ಷಗಳಲ್ಲಿ ಕೋವಿಡ್‌ನ ಆರ್ಥಿಕ ಸಂಕಷ್ಟದ ನಡುವೆಯೂ ಈ ವರ್ಷ ವಿಕಾಸ್ ಬ್ಯಾಂಕ್ ತನ್ನ ಪ್ರಗತಿಯ ನಡೆಯನ್ನು ಮುಂದುವರೆಸಿಕೊಂಡು ಬಂದಿರುವುದು ಸಂತೋಷಕರ ವಿಷಯವಾಗಿದೆ. ಈ ವರ್ಷದಲ್ಲಿ 1050 ಕೋಟಿ ವ್ಯವಹಾರ ನಡೆಸಿ, 11.23 ಕೋಟಿ ಲಾಭ ಗಳಿಸಿದೆ. ಅದರಲ್ಲಿ ಆದಾಯ ತೆರಿಗೆ ಅವಕಾಶಗಳ ನಂತರ ಬ್ಯಾಂಕ್ 6.35 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದರು.

ಬ್ಯಾಂಕು 52 ಕೋಟಿ ಸ್ವಂತ ಬಂಡವಾಳ ಹೊಂದಿದ್ದು, ಠೇವಣಿ 645 ಕೋಟಿ ಹೊಂದಿದೆ. ಸಾಲ ಮತ್ತು ಮುಂಗಡ 405 ಕೋಟಿ ಇದ್ದು, ಒಟ್ಟು 1050 ಕೋಟಿ ವ್ಯವಹಾರ ನಡೆಸಿದೆ. ಅನುತ್ಪಾದಕ ಆಸ್ತಿ ಶೇ.3.69%ರಷ್ಟಿದ್ದು, ನಿವ್ವಳ ಅನುತ್ಪಾದಕ ಆಸ್ತಿ ಶೇ.1.30%ರಷ್ಟಿದೆ. ಈ ವರ್ಷದಲ್ಲಿ ಬೀದರ್‌ನಲ್ಲಿ ಹೊಸ ಶಾಖೆ ಆರಂಭಿಸಿದೆ. ಬೆಳ್ಳಿಹಬ್ಬದ ನಿಮಿತ್ತ ವರ್ಷದ 365 ದಿನಗಳಲ್ಲಿ ವಿಶಿಷ್ಟ ರೀತಿಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡು ಬರುತ್ತಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕಿನ ಸಿಇಒ ಪ್ರಸನ್ನ ಹಿರೇಮಠ, ನಿರ್ದೇಶಕರಾದ ಪದ್ಮ, ರಮೇಶ ಪುರೋಹಿತ, ವೆಂಕಪ್ಪ ಇದ್ದರು.

ವಿಶ್ವ ವಾಣಿ ಪತ್ರಿಕೆ

# ವಿಕಾಸ ಬ್ಯಾಂಕಿಗೆ 11.23 ಕೋಟಿ ರು. ಲಾಭ

**ಹೊಸಪೇಟೆ:** 2021-22ನೇ ವರ್ಷಾಂತ್ಯದಲ್ಲಿ 1050 ಕೋಟಿ ರು ವ್ಯವಹಾರ ನಡೆದಿದ್ದು ಒಟ್ಟು 11.23 ಕೋಟಿ ರೂಗಳ ಲಾಭಗಳಿಕೆಯಾಗಿದೆ ಎಂದು ವಿಕಾಸ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಚ. ಹಿರೇಮಠ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತ ನಾಡಿ, ಬ್ಯಾಂಕಿನ ಸ್ವಂತ ಬಂಡವಾಳ 52 ಕೋಟಿ ಇದ್ದು ಠೇವಣಿ 645 ಕೋಟಿ ರೂಗಳಾಗಿದೆ. 405 ಕೋಟಿ ಸಾಲ ಹಾಗೂ ಮುಂಗಡ ಇದ್ದು ಬ್ಯಾಂಕಿನ ನಿವ್ವಳ ಲಾಭ 6.35 ಕೋಟಿ ರೂಗಳಿದೆ ಎಂದು ಹೇಳಿದರು.

ಬ್ಯಾಂಕಿನ ಅನುತ್ಪಾದಕ ಆಸ್ತಿ ಶೇ. 3.69 ಕೋಟಿ ಹಾಗೂ ನಿವ್ವಳ ಅನುತ್ಪಾದಕ ಆಸ್ತಿ ಶೇ. 1.30 ರಷ್ಟಿದೆ. ಕೋವಿಡ್ 19 ಕಷ್ಟಕರ ಪರಿಸ್ಥಿತಿಯಲ್ಲಿಯೂ ಬ್ಯಾಂಕ್ ಉತ್ತಮ ರೀತಿಯಲ್ಲಿ ವ್ಯವಹಾರದ ಗಡಿ ದಾಟಿರುವುದು ನೆಮ್ಮದಿ ತಂದಿದೆ ಎಂದರು.

ಬೀದರ್ ನಗರದ ಬೀದರ ಮಹಿಳಾ ಪಟ್ಟಣ ಸಹಕಾರ ಬ್ಯಾಂಕ್ ವಿಕಾಸ ಬ್ಯಾಂಕಿನೊಂದಿಗೆ ವಿಲೀನಗೊಂಡ ನಂತರ ಬೀದರ ನಗರದ ಜನತೆಗೆ ವಿನೂತನ ಸೇವೆಗಳನ್ನು ನೀಡುತ್ತಾ ಆ ಭಾಗದ ಜನ ಮನ್ನಣೆಯನ್ನುಗಳಿಸುತ್ತಿದೆ. ಬೆಳ್ಳಿ ಹಬ್ಬದ ಸಂಭ್ರಮಾಚರಣೆಯಲ್ಲಿರುವ ವಿಕಾಸ ಬ್ಯಾಂಕ್ ಇಡಿ ವರ್ಷ 365 ದಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿಶಿಷ್ಟ ರೀತಿಯಲ್ಲಿ ಬೆಳ್ಳಿ ಹಬ್ಬ ಆಚರಿಸುತ್ತಾ ಈಗಾಗಲೇ 223 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರೈಸಲಾಗಿದೆ ಎಂದು ತಿಳಿಸಿದರು. ಸಹಕಾರಿ ಕ್ಷೇತ್ರದಲ್ಲಿ ಬೆಳೆದ ವಿಕಾಸ ಬ್ಯಾಂಕು ಸಹಕಾರಿ ಕ್ಷೇತ್ರದ ಬಲವರ್ಧನೆಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಈ ಭಾಗದ ಆಯ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಪ್ರತಿ ತಿಂಗಳು ಎರಡನೇ ಶನಿವಾರ ಸಹಚಿಂತನ ಕಾರ್ಯಕ್ರಮ ಮತ್ತು ಪ್ರತಿ ಗುರುವಾರ ಬೆಳ್ಳಿ ಹಬ್ಬದ ಪ್ರಯುಕ್ತ ಸಹಕಾರಿಗಳ ವಿಕಾಸ ಕಾರ್ಯಕ್ರಮದ ಮೂಲಕ ಸಹಕಾರಿ ಸಂಸ್ಥೆಯನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಎಲ್ಲಾ ನೈಪುಣ್ಯತೆಗಳ ಪರಿಚಯ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಕಾಸ ಬ್ಯಾಂಕು ಸ್ಮಾಲ್ ಫೈನಾನ್ಸ್ ಬ್ಯಾಂಕ್ ಆಗಿ ಪರಿವರ್ತನೆಗೊಳ್ಳಲು ಅರ್ಜಿ ಸಲ್ಲಿಸಲು ಅಗತ್ಯವಿರುವ ಮಾನದಂಡವನ್ನು ಹೊಂದಿದ್ದು ಮುಂಬರುವ ದಿನಗಳಲ್ಲಿ ಈ ಅವಕಾಶವನ್ನು ಬಳಸಿ ಹೊಸ ಹೆಜ್ಜೆಯನ್ನು ಹಾಕಲು ಆಡಳಿತ ಮಂಡಳಿ ಸಿದ್ಧತೆ ನಡೆದಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಬ್ಯಾಂಕ್‌ನ ನಿರ್ದೇಶಕರಾದ ರಮೇಶ್ ಪುರೋಹಿತ್, ವೆಂಕಪ್ಪ, ಪದ್ಮಾ, ಸಿಇಒ ಪ್ರಸನ್ನ ಇದ್ದರು.



ಹೊಸಪೇಟೆ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿಕಾಸ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಹಿರೇಮಠ ಶುಕ್ರವಾರ ಮಾತನಾಡಿದರು.